ಎಂದು ಇವರಿಬ್ಬರು ಬೋರ್ಡ್ ಮೀಟಿಂಗ್‌ನಲ್ಲಿ ಹೇಳಿದ್ದಾರೆ. ಮೀಟಿಂಗ್‌ನಲ್ಲಿ ಛೇರ್‌ಮನ್ ಇದ್ದರು, ಸ್ಪೇಷಲ್ ಆಫೀಸರ್ ಆಗಿ ಡಿ.ಸಿ.ಯವರಿದ್ದರು. ಅವರ ಮಾತನ್ನು ಕೇಳಲಿಲ್ಲ. ಅವರು ರಿಸೈನ್ ಮಾಡಿದ್ದಾರೆ ಮತ್ತು ಒಬ್ಬ ರೈತ ಸತ್ತಿದ್ದಾನೆ. ಸರ್ಕಾರ ಇನ್ನೂ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ತಮ್ಮ ಮೂಲಕ ನಾನು ಸರ್ಕಾರದವರಲ್ಲಿ ವಿನಂತಿಸುತ್ತಿದ್ದೇನೆ, ಆ ಕಾರ್ಖಾನೆಯಲ್ಲಿ ಏನೇನು ಅವ್ಯವಹಾರವಾಗುತ್ತಿದೆ ಎಂಬ ಬಗ್ಗೆ ಕ್ರಮ ಕೈಗೊಳ್ಳಬೇಕು. ಮತ್ತು ಇದಕ್ಕಿಂತ ಮುಂಚೆ ಒಂದು ಸಿ.ಓ.ಡಿ. ಎನ್‌ಕ್ವೈರಿಯಾಗಿದೆ. ಮಾನ್ಯ ಕತ್ತಿಯವರು ಮಂತ್ರಿಗಳಾಗಿದ್ದಾಗ ರೆಫರ್ ಮಾಡಿದಂಥ ಸಿ.ಓ.ಡಿ. ಎನ್‌ಕ್ವೈರಿ ರಿಪೋರ್ಟ್ ಇನ್ನೂ ಹೊರಗೆ ಬಂದಿಲ್ಲ. ಅಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆ ವಿವರವಾಗಿ ಒಂದು ಜ್ಯುಡಿಷಿಯಲ್ ಎನ್‌ಕ್ವೈರಿಯಾಗಬೇಕು ಮತ್ತು ಸತ್ತಿರುವ ರೈತನಿಗೆ ಪರಿಹಾರ ಕೊಡಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡುತ್ತೇನೆ.

ಶ್ರೀ ಹೆಚ್. ಶಿವಪ್ಪ (ಸಕ್ಕರೆ ಸಚಿವರು) :— ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಸಂಪೂರ್ಣವಾದ ವಿವರವನ್ನು ತರಿಸಿಕೊಂಡು, ಕಾನೂನು ರೀತಿ ಏನು ಆಗತ್ಯ ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ವಿವರಣೆಯಲ್ಲಿ ಏನಾದರೂ ಇರೆಗ್ಯೂಲಾರಿಟೀಸ್ ಇದೆ ಎನ್ನುವುದು ಗೊತ್ತಾದರೆ ಅಕ್ರಮಗಳಾಗಿವೆ ಎಂದು ಗೊತ್ತಾದರೆ, ಕಾನೂನು ರೀತಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ:— ಈಗಾಗಲೇ ಒಂದು ಸಿಓಡಿ ಎನ್‌ಕ್ವೈರಿಯಾಗಿದೆ. ಅದರ ರಿಪೋರ್ಟ್ ಏನಾಗಿದೆ?

ಅಧ್ಯಕ್ಷರು :— ಮಾಡುತ್ತಾರೆ. ಮಾಡುತ್ತೇವೆ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ:— ನಾನು ಅವರಿಗೆ ಎಲ್ಲಾ ದಾಖಲೆಗಳನ್ನು ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು :— ಕಳುಹಿಸಿಕೊಡಿ.

(ಎ) ಕೆ.ಜಿ.ಎಫ್.ನಲ್ಲಿರುವ ಸುಭಾಷಿಣಿ ಜ್ಯೂನಿಯರ್ ಕಾಲೇಜಿನ ಪ್ರಿನ್ಸಿಪಾಲರನ್ನು ಸಸ್ಪೆಂಡ್ ಮಾಡಿರುವ ಬಗ್ಗೆ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್.) :— ಸನ್ಮಾನ್ಯ ಸಭಾಧ್ಯಕ್ಷರೇ, ಕೆ.ಜಿ.ಎಫ್‌ನಲ್ಲಿ ಸುಭಾಷಿಣಿ ಕಾಲೇಜು ಎಂದು ಒಂದು ಜ್ಯೂನಿಯರ್ ಕಾಲೇಜು ಇದೆ. ಆ ಕಾಲೇಜಿನ ಪ್ರಿನ್ಸಿಪಾಲರನ್ನು ಆ ಕಾಲೇಜಿನ ಮ್ಯಾನೇಜ್‌ಮೆಂಟ್‌ನವರು ಸಸ್ಪೆಂಡ್ ಮಾಡಿ ಸುಮಾರು ಒಂದು ವರ್ಷವಾಗಿದೆ. ಸಸ್ಪೆಂಡ್ ಮಾಡುವುದಕ್ಕೆ ಕಮೀಷನರ್‌ರವರಿಂದ ಪರ್ಮಿಷನ್ ತೆಗೆದುಕೊಳ್ಳಬೇಕು. ಮ್ಯಾನೇಜ್‌ಮೆಂಟಿನವರು ಪರ್ಮಿಷನ್ ಕೇಳಿದ ತಕ್ಷಣ ಅವರು

ಪರ್ಮಿಷನ್ ಕೊಟ್ಟಿದ್ದಾರೆ, ಆ ಪ್ರಿನ್ಸಿಪಾಲರನ್ನು ಸಸ್ಪೆಂಡ್ ಮಾಡಿದ್ದಾರೆ. ಸುಮಾರು ಒಂದು ವರ್ಷದಿಂದ ಸಂಬಳವಿಲ್ಲದೆ ಆ ಪ್ರಿನ್ಸಿಪಾಲರ ಕುಟುಂಬದವರು ಕಷ್ಟಪಡುತ್ತಿದ್ದಾರೆ. ಮೂರು ತಿಂಗಳಾದ ಮೇಲೆ ಶೇ. 50ರಷ್ಟು ಕೊಡಬೇಕು, ಆರು ತಿಂಗಳಾದ ಮೇಲೆ ಶೇ. 75 ರಷ್ಟು ಕೊಡಬೇಕು. Whatever the process of enquiry, they should conduct. I brought this to the Commissioner's notice also. But, they have not taken care of him. Ultimately, ಇವತ್ತು ಅವರ ಕುಟುಂಬದ ಸದಸ್ಯರು, ನಾವು ವಿಷ ಕುಡಿದು ಸತ್ತುಹೋಗುತ್ತೇವೆ, ಒಂದು ವರ್ಷವಾಗಿದೆ, ಇನ್ನೂ ಏನೂ ಕ್ರಮ ತೆಗೆದುಕೊಂಡಿಲ್ಲ, ಒಂದು ವರ್ಷದಿಂದ ನಮಗೆ ಸಂಬಳ ಕೊಟ್ಟಿಲ್ಲ. ಯಾವುದನ್ನೂ ಕೊಟ್ಟಿಲ್ಲ, ಎಂದು ಹೇಳುತ್ತಿದ್ದಾರೆ. ಮೂರು ತಿಂಗಳ ಸಂಬಳವನ್ನು ಕೊಡುತ್ತೇವೆ, ಬಿಲ್ ಪಾಸ್ ಮಾಡಿ ಎಂದು ಕಮೀಷನರ್‌ರವರು ಎಂದು ಆರ್ಡರ್ ಪಾಸ್ ಮಾಡಿ ಕಳುಹಿಸಿದ್ದಾರೆ. ಅದರ ಮೇಲೆ ಮ್ಯಾನೇಜ್‌ಮೆಂಟ್‌ನವರು ಯಾವುದೇ ಕ್ರಮ ತೆಗೆದುಕೊಂಡಿಲ್ಲ. They have not taken any action against them. ಈಗ ಅವರು ಯಾವ ಸ್ಥಿತಿಯಲ್ಲಿ ಇರಬಹುದು. Your Commissioner was interested. Suomoto he has agreed to suspend. But, he has no guts to question the management and pay back the salary. What type of administration is going on by this Government? ನೀವು ಏನು ಸಮಾಧಾನ ಹೇಳುತ್ತೀರಿ ಎಂದರೆ ನಾವು ಆದಷ್ಟು ಬೇಗ ನೋಡುತ್ತೇವೆ, ವಿಚಾರಣೆ ಮಾಡುತ್ತೇವೆ ಎಂದು ಹೇಳುತ್ತೀರಿ. ಸಮಾಧಾನ ಹೇಳುವುದರಲ್ಲಿ ನೀವು ಸೂಪರ್‌ಸ್ಟಾರ್‌ಗಳು, ಸಾರಿ ಹೇಳುವುದರಲ್ಲಿ ನೀವು ಸೂಪರ್‌ಸ್ಟಾರ್‌ಗಳು, ಮಾನ್ಯ ಮಂತ್ರಿಗಳು ಸದನಕ್ಕೆ ಬಂದಿಲ್ಲ ಎಂದರೆ ನಾಣಯ್ಯನವರು `Iam sorry.' ಎಂದು ಹೇಳುತ್ತಾರೆ. This fact, I am bringing to your notice. ಒಂದು ವರ್ಷವಾಗಿದೆ, ಅವರಿಗೆ ಸಂಬಳ ಕೊಟ್ಟಿಲ್ಲ. ಅವರು ಎಂ.ಎ. ಗ್ರಾಜ್ಯುಯೇಟ್ ಆಗಿದ್ದು, ಒಂದು ಕಾಲೇಜಿನ ಪ್ರಿನ್ಸಿಪಲ್ ಆಗಿದ್ದವರು, ಕೂಲಿ ಕೆಲಸ ಮಾಡುವುದಕ್ಕೆ ಆಗುತ್ತದೆಯೇ? He is a M.A. Graduate. Can he go for a coolie work? I brought this to the notice of the government, to the Minister and to the Commissioner. If the Minister does not get the salary, you will call your Secretary and ask. What happened to Commissioner? He is not getting salary? What happened to M.A. Graduate. How about his family? I request you kindly to pass an order to release his salary.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಾರ್ತಾ ಹಾಗೂ ಪ್ರವಾಸೋದ್ಯಮ ಸಚಿವರು) :— ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಚಿವರು ವಿಧಾನಪರಿಷತ್ತಿನಲ್ಲಿದ್ದಾರೆ. ಖಂಡಿತವಾಗಿ ಅವರ ಕಳಕಳಿಗೆ ಅನುಗುಣವಾದಂಥ ರೀತಿಯಲ್ಲಿ ನಾಳೆ ಇದಕ್ಕೆ ಪಾಸಿಟೀವ್ ಆಗಿ ಉತ್ತರವನ್ನು ಕೊಡಿಸುತ್ತೇವೆ.